SC No.71/2022
CW-17 / PW-15

# ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು

## ಸತ್ರ ಮೊಕದ್ದಮೆ ಸಂಖ್ಯೆ 71/2022

ಚಾ.ಸಾಃ 17 ಫ್ರಾ.ಸಾಃ 15

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ 05.01.2026

| | | |
|---|---|---|
| ಸಾಕ್ಷಿಯ ಹೆಸರು | : | ದೀಪಕ್ ಕುಮಾರ ಇನ್ನಾಣಿ |
| ತಂದೆಯ ಹೆಸರು | : | ಓಂ ಪ್ರಕಾಶ ಇನ್ನಾಣಿ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಿಳಾಸ | : | ರಾಯಚೂರು |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು ರಮಾದೀಪ್ ಇನ್ ಫ್ರಾ ಪ್ರೈವೆಟ್ ಲಿವಿಟೇಡ್ ಕಂಪನಿಯಲ್ಲಿ ಡೈರೆಕ್ಟರ್ ಇರುತ್ತೇನೆ. ಸದರಿ ಕಂಪನಿಯ ಹೆಸರಿನಲ್ಲಿ ಜಮೀನು ಇತ್ತು. ನ್ಯಾಯಾಲಯದಲ್ಲಿರುವ ಆರೋಪಿತರು ಗೊತ್ತಿಲ್ಲ. ಸದರಿ ಜಮೀನನ್ನು ಕ್ಲೀನ್ ಮಾಡುವುದಕ್ಕಾಗಿ ಯಾರಿಗೂ ಗುತ್ತಿಗೆ ಕೊಟ್ಟಿರಲಿಲ್ಲ. ಆರೋಪಿತರು ಏನು ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿಸಲಾಯಿತು)

**ಮಾನ್ಯ ಸರಕಾರಿ ಅಭಿಯೋಜಕರಿಂದ ಪಾಟೀ ಸವಾಲುಃ-**

02. ನಮ್ಮ ಕಂಪನಿಯ ಹೆಸರಿನಲ್ಲಿರುವ ಸರ್ವೆ ನಂ.747/10 ರಲ್ಲಿಯ ಜಮೀನನ್ನು 1 ಮತ್ತು 6 ನೇ ಆರೋಪಿತರಿಗೆ ಕ್ಲೀನ್ ಮಾಡಲು ಮತ್ತು

ಅಲ್ಲಿಯ ಕಲ್ಲುಗಳನ್ನು ಚಾನಲ್ ನಿಂದ ತುಂಡು ಮಾಡಿ ಜೆ.ಸಿ.ಬಿಯಿಂದ ಕ್ಲೀನ್ ಮಾಡಲು ರೂಪಾಯಿ ಒಂದು ಲಕ್ಷಗಳಿಗೆ ಗುತ್ತಿಗೆ ಕೊಡಲಾಗಿತ್ತು ಎನ್ನುವುದು ಸರಿಯಲ್ಲ. ಆರೋಪಿತರು ಕಲ್ಲುಗಳನ್ನು ತುಂಡು ಮಾಡಲು ಸ್ಫೋಟಕ ವಸ್ತುಗಳನ್ನು ಬಳಕೆ ಮಾಡಿದರು ಎನ್ನುವುದು ಸರಿಯಲ್ಲ. ಆರೋಪಿ 7, 8 ರವರು ಅನಧಿಕೃತವಾಗಿ ಸ್ಫೋಟಕಗಳನ್ನು ಸರಬರಾಜು ಮಾಡಿದ್ದರು ಎನ್ನುವುದು ಸರಿಯಲ್ಲ. ಚಾಸಾ-1 ರಿಂದ ಈ ವಿಷಯ ನನಗೆ ತಿಳಿಯಿತು ಎನ್ನುವುದು ಸರಿಯಲ್ಲ. ಈಗ ಓದಿ ಹೇಳಿದ ಪ್ರಕಾರ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು **ನಿಪಿ.24** ಎಂದು ಗುರುತಿಸಲಾಯಿತು.

03. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

(ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಹತ್ತಿಕಾಳ ಪ್ರಭು ಸಿದ್ದಪ್ಪ)**
ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.